ಅಷ್ಟರಲ್ಲಿ ಅವರಿಗೆ ಬೆನ್ನು ತುರಿಸಹತ್ತಿತು. ಅವರು ಜನಿವಾರವನ್ನೇ ಹಿಂದೆ ಮುಂದೆ ಎಳೆದು ಅದರಲ್ಲಿ ತನ್ನ ಬೆನ್ನನ್ನು ನೀವುತ್ತಾ 'ಉಪನಯನ ಮಾಡುವುದು ಕಷ್ಟ ಅಲ್ಲ ಭಟ್ಟರೇ, ಈಗ ಈ ಪುರೋಹಿತ ವರ್ಗದವರಲ್ಲಿ ಯಾರನ್ನು ಗುಟ್ಟಿನಲ್ಲಿ ನಾನು ಕರೆದರೂ ನಾಳೆ ಅವರು ಹೀಗಂತೆ, ಹಾಗಂತೆ ಎಂದು ಠಂಠಂ ಮಾಡದೆ ಇರುತ್ತಾರೆಯೇ? ಆಮೇಲೆ ಅದು ಈ ಮಠದ ಮೇಲ್ವಿಚಾರಣೆ ನೋಡಿಕೊಳ್ಳುವ ಪೇಜಾವರ ಮಠದವರೆಗೆ ಹೋದೀತು. ಆಗ ನನಗೆ ಅದು ಕಷ್ಟಕ್ಕಿಟ್ಟುಕೊಂಡೀತು' ಎಂಬ ಆತಂಕ ವ್ಯಕ್ತಪಡಿಸಿದರು.

ಇಬ್ಬರೂ ಸ್ವಲ್ಪ ಹೊತ್ತು ವಿಚಾರ ವಿನಿಮಯ ಮಾಡಿಕೊಂಡರೂ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಪಕ್ಕನೆ ಏನೋ ಹೊಳೆದದ್ದನ್ನು ಮುನ್ನಲೆಗೆ ತಂದುಕೊಂಡ ರಾಮಚಂದ್ರ ಆಚಾರ್ಯರು, 'ನಿಮ್ಮ ಹೆಬ್ರಿ ಸಮೀಪದಲ್ಲಿ ಬಕ್ರೆ ಮಠ ಇದೆ ಎನ್ನುವುದು ಗೊತ್ತಾ ನಿಮಗೆ? ಆ ಮಠದ ಪುರೋಹಿತರ ತಮ್ಮನಿಗೆ ನನ್ನ ತಂಗಿಯನ್ನೇ ಕೊಟ್ಟದ್ದು. ಅಲ್ಲಿ ಅಬ್ರಾಹ್ಮಣರಿಗೂ ಉಪನಯನ ಸಂಸ್ಕಾರ ನಡೆಸುತ್ತಾರೆ ಎನ್ನುವುದು ನನಗೆ ಗೊತ್ತಿದೆ. ನೀವು ಯಾಕೆ ಅಲ್ಲಿ ಪ್ರಯತ್ನಿಸಬಾರದು?' ಎಂದು ಪ್ರಶ್ನಿಸಿದರು.

ಗೋವಿಂದ ಭಟ್ಟರು ಮರು ಮಾತನಾಡದೆ ಮನೆಗೆ ಬಂದರು. ಒಂದು ವಾರ ಕಳೆದ ಮೇಲೆ ಹೆಬ್ರಿ ಸಮೀಪದ ಬಕ್ರೆ ಮಠಕ್ಕೆ ಹೋದರು. ಪಾರುಪತ್ಯಗಾರರಿಗೆ ವಿಷಯ ತಿಳಿಸಿದರು. ಅವರು 'ಯಾವ ಸ್ವಾಮಿಗಳು ಏನೇ ಹೇಳಲಿ. ಬ್ರಾಹ್ಮಣ್ಯದ ಸಂಕೇತವಾದ ಉಪನಯನ ಸಂಸ್ಕಾರ ಕೊಡಿ ಎಂದು ಅಪೇಕ್ಷಿಸಿ ಬಂದವರಿಗೆ ಇಲ್ಲ ಎನ್ನುವುದಿಲ್ಲ ನಾನು! ನಿಮ್ಮ ಹುಡುಗನನ್ನು ಖಂಡಿತ ಕರೆತನ್ನಿ' ಎಂಬ ಆಶ್ವಾಸನೆ ನೀಡಿದರು.

ಬಕ್ರೆ ಮಠದಲ್ಲಿ ಉಪನಯನದ ವಿಧಿವಿಧಾನಗಳೆಲ್ಲ ಮುಗಿದ ಮೇಲೆ ಗೋವಿಂದಭಟ್ಟರು ಇನ್ನು ಉಡುಪಿಗೆ ಹೋಗಿ ಯಾವುದಾದರೂ ಒಂದು ಮಠವನ್ನು ಆಶ್ರಯಿಸಿ ಅಲ್ಲಿ ಶ್ರೀನಿವಾಸನ ಊಟ ವಸತಿಯ ಏರ್ಪಾಡು ಮಾಡಿ ಮುಂದೆ ಅವನನ್ನು ಓದಿಸುವುದು ಎಂಬ ನಿರ್ಧಾರಕ್ಕೆ ಬಂದರು. ಒಂದು ಮುಂಜಾನೆ ಅವರು ಶ್ರೀನಿವಾಸನನ್ನು ಕರಕೊಂಡು ಉಡುಪಿಗೆ ಹೊರಟು, ಅಲ್ಲಿಗೆ ತಲುಪುವಾಗ ಗಂಟೆ ಹನ್ನೆರಡು ದಾಟಿತ್ತು. ಹಾಗಾಗಿ ಮಠದ ಊಟ ಸಿಗದಿದ್ದರೂ ಇಬ್ಬರೂ ರಥಬೀದಿಯ ಹೋಟೆಲೊಂದರಲ್ಲಿ ಮಧ್ಯಾಹ್ನದ ಊಟ ಮುಗಿಸಿ ಪುತ್ತಿಗೆ ಮಠಕ್ಕೆ ಬಂದಾಗ ಸ್ವಾಮಿಗಳ ಭೇಟಿ ಸುಲಭದಲ್ಲೇ ಆಯಿತು. ಭಟ್ಟರು ಶ್ರೀನಿವಾಸನನ್ನು ಹೊರಗೆ ಕುಳ್ಳಿರಿಸಿ, ಸ್ವಾಮಿಗಳಲ್ಲಿ 'ನಮ್ಮ ಪಕ್ಕದ ಮನೆಯ ಅನಾಥ ಹುಡುಗನೊಬ್ಬನನ್ನು ಮುಂದಿನ ಓದಿಗೆ ಇಲ್ಲಿ ಕರೆತಂದಿದ್ದೇನೆ. ಇವನಿಗೆ ತಮ್ಮ ಆಶೀರ್ವಾದ ಬೇಕು' ಎಂದು ವಿನಂತಿಸಿಕೊಂಡರು. ಸ್ವಾಮಿಗಳು 'ಪರಿಶೀಲಿಸೋಣ' ಎಂಬ ಆಶ್ವಾಸನೆ ನೀಡಿ ಪಾರುಪತ್ಯಗಾರರನ್ನು ಕರೆದು 'ಇವರಿಗೆ ಮುಂದಿನ ವ್ಯವಸ್ಥೆ ಮಾಡಲು ಸಾಧ್ಯವೋ ನೋಡಿ' ಎಂದು ಆದೇಶಿಸಿದರು.

## ಕಳೆದ ಸಂಚಿಕೆಯಲ್ಲಿ



ಗೋವಿಂದ ಭಟ್ಟರ ಆಶ್ರಯದಲ್ಲಿ ಸೌಮ್ಯ ನೆರಳು ಕಂಡುಕೊಂಡಿದ್ದು ಕುಪ್ಪಣ್ಣ ಭಟ್ಟನ ಅಸಹನೆಯನ್ನು ಹೆಚ್ಚಿಸಿತು. ಹೇಗಾದರೂ ಮಾಡಿ ಸೌಮ್ಯಳನ್ನು ವಶಪಡಿಸಿಕೊಳ್ಳಲು ಮುಂದಾದ ಆ ಮಾಂತ್ರಿಕನಿಗೆ ಗೋವಿಂದ ಭಟ್ಟರಿಂದ ತಕ್ಕ ಶಾಸ್ತಿಯೂ ಆಯಿತು. ಒಂದು ಮಳೆಗಾಲದ ದಿನ ಬಿರುಮಳೆಗೆ ಸಿಕ್ಕ ಗೋವಿಂದ ಭಟ್ಟರು, ಸೌಮ್ಯಳ ಮನೆಯಲ್ಲಿ ಆಶ್ರಯಪಡೆದರು. ಇಬ್ಬರ ಅರಿವಿಗೆ ಬರುವ ಮೊದಲೇ ಯಾರೋ ನಿರ್ಧರಿಸಿದಂತೆ ಅವರಿಬ್ಬರ ಸಮಾಗಮವೂ ಆಗಿಹೋಯಿತು. ನೈತಿಕತೆ, ಅನೈತಿಕತೆಯ ಪ್ರಶ್ನೆಗಳು ಬಾಧಿಸಿದರೂ ನಡೆದುದನ್ನು ಪ್ರಕೃತಿ ನಿಯಾಮಕ ಎಂದು ಇಬ್ಬರೂ ಒಪ್ಪಿಕೊಳ್ಳುವ ವೇಳೆಗೆ, ಸೌಮ್ಯಳಿಗೆ ಗರ್ಭ ನಿಂತಿತ್ತು. ಭಟ್ಟರ ಹೆಂಡತಿ ಶಂಕರಿ ಉದಾತ್ತ ಮನಸ್ಸಿನವರು. ನಡೆದ ಅಚಾತುರ್ಯವನ್ನು ಆಕಸ್ಮಿಕವೆಂದೇ ಬಗೆದು, ಸೌಮ್ಯಳ ಬೆನ್ನಿಗೆ ನಿಂತರು. ಕೆಲಸದ ಹೆಣ್ಣನ್ನು ಮನೆಯವಳಂತೆ ನೋಡುವುದು ಶಂಕರಿ ಅವರಿಗೆ ಕಷ್ಟವಾಗಲಿಲ್ಲ. ಬಿಕ್ಕಟ್ಟು ಒಂದು ಹಂತಕ್ಕೆ ಬಗೆಹರಿಯಿತು ಎನ್ನುವ ವೇಳೆಗೆ ಊರೂರು ಸುತ್ತುತ್ತಿದ್ದ ಸೌಮ್ಯಳ ಗಂಡ ಮನೆಗೆ ಬಂದಿದ್ದ.

ಪಾರುಪತ್ಯಗಾರು 'ಮಠಕ್ಕೆ ಹೇಳಿಕೊಳ್ಳುವಂಥ ಉತ್ಪತ್ತಿ ಇಲ್ಲ ಭಟ್ಟರೇ. ಆದರೂ ನೀವು ಮಠಕ್ಕೆ ಬೇಕಾದವರಾಗಿರುವುದರಿಂದ ಖಂಡಿತ ಕಷ್ಟವಾದರೂ ಅವಕಾಶ ಕಲ್ಪಿಸೋಣ' ಎಂದು ಒಪ್ಪಿಗೆ ನೀಡಿ ಶ್ರೀನಿವಾಸನನ್ನು ಹತ್ತಿರ ಕರೆದರು. 'ನಿನ್ನ ಅಪ್ಪನ ಹೆಸರೇನು? ಗೋತ್ರ ಯಾವುದು?' ಎಂದು ಪ್ರಶ್ನಿಸಿದರು.

ಇದನ್ನು ನಿರೀಕ್ಷಿಸದಿದ್ದ ಶ್ರೀನಿವಾಸ 'ನಾನು ಅಪ್ಪ ಅನ್ನುವುದು ಇವರನ್ನೇ. ನನ್ನ ಗೋತ್ರ ಯಾವುದು ಅನ್ನುವುದನ್ನು ಇವರನ್ನೇ ಕೇಳಿ' ಎಂದ.

ಪಾರುಪತ್ಯಗಾರರಿಗೆ ಇದರಲ್ಲಿ ಏನೋ ರಹಸ್ಯ ಇದೆ ಎಂದು ಅನಿಸಿತು. ಅವರು ಗೋವಿಂದಭಟ್ಟರನ್ನು ತಮ್ಮ ಕಚೇರಿಯೊಳಗೆ ಕರೆದು, 'ನಿಮ್ಮ ಹುಡುಗ ಹೀಗೆ ಹೇಳ್ತಿದ್ದಾನಲ್ಲ ಭಟ್ರೇ. ವಸ್ತುಸ್ಥಿತಿ ಏನು ಎಂದು ಸ್ಪಷ್ಟವಾಗಿ ಹೇಳಿ' ಎಂದರು ಮೆತ್ತಗಿನ ಸ್ವರದಲ್ಲಿ.

ಭಟ್ಟರು 'ಹಾಗೇನಿಲ್ಲ ಸ್ವಾಮೀ. ವಿಷಯ ಏನೆಂದು ಹೇಳಲು ಸ್ವಲ್ಪ ಸಂಕೋಚ' ಎಂದು ಮುಜುಗರಪಟ್ಟರು. ಆ ವಿಷಯವನ್ನು ಆಗಲೇ ತಿಳಿದಂತಿದ್ದ ಪಾರುಪತ್ಯಗಾರರು 'ನೀವು ಒಬ್ಬಳನ್ನು ಇರಿಸಿಕೊಂಡಿದ್ದೀರಿ ಎನ್ನುವ ವಿಷಯವು ಶ್ರೀಮಠಕ್ಕೆ ಆಗಲೇ ತಿಳಿದಿದೆ! ಈ ಹುಡುಗ ನೀವು ಇರಿಸಿಕೊಂಡವಳಲ್ಲಿ ಹುಟ್ಟಿದ್ದಾದರೆ ನಾವು ಅವನನ್ನು ಮಠದಲ್ಲಿಟ್ಟು ಓದಿಸಲಾಗುವುದಿಲ್ಲ' ಎಂದರು ನಿಷ್ಠುರವಾಗಿ.

ಗೋವಿಂದ ಭಟ್ಟರಿಗೆ ಅವಮಾನ ಮತ್ತು ನಾಚಿಕೆಯಾಯಿತು. ಅವರು 'ಸ್ವಾಮಿ ನಾನು ಯಾರನ್ನೂ ಇರಿಸಿಕೊಂಡಿಲ್ಲ. ಎರಡನೇ ಹೆಂಡತಿಯಲ್ಲಿ ಹುಟ್ಟಿದವನು ಈತ' ಎಂದರು ವಿನಯದಲ್ಲಿ.

'ಸರಿ. ಇವನು ನಿಮ್ಮ ಎರಡನೇ ಹೆಂಡತಿಯ ಮಗ ಇರಬಹುದು, ಒಪ್ಪಿಕೊಳ್ಳೋಣ. ಆದರೆ ನಿಮ್ಮ ಎರಡನೇ ಹೆಂಡತಿ ಬ್ರಾಹ್ಮಣ ಜಾತಿಯವಳಲ್ಲ ತಾನೇ?'

ಪಾರುಪತ್ಯಗಾರರ ಈ ಪ್ರಶ್ನೆಗೆ ಭಟ್ಟರಲ್ಲಿ ಉತ್ತರವಿರಲಿಲ್ಲ. ಅವರು 'ಬೇಡ ಬಿಡಿ ಹಾಗಾದರೆ' ಎಂದು ಕೈಮುಗಿದು ಮೇಲೆದ್ದರು.

ಆಚಾರ್ಯರು 'ನೋಡಿ ಭಟ್ಟರೇ ನೀವು ಶಾಸ್ತ್ರ ಓದಿದವರು, ತತ್ವ ತಿಳಿದವರು ಎಂದುಕೊಂಡಿದೆ ಶ್ರೀಮಠ. ನೀವೇ ಅಧರ್ಮದ ಕೆಲಸಗಳನ್ನು ಮಾಡಿ ಅದರಲ್ಲಿ ಮಠಸಂಸ್ಥಾನಗಳೂ ಒಳಗೊಳ್ಳುವಂತೆ ಮಾಡುವುದು ಮಹಾಪರಾಧವೆಂದು ಯಾಕೆ ತಿಳಿದಿಲ್ಲ?' ಎಂದು ಪ್ರಶ್ನಿಸಿದರು.

ಗೋವಿಂದ ಭಟ್ಟರು 'ಕೃಷ್ಣ ಕೃಷ್ಣ' ಎಂದುಕೊಂಡರು. ರಾತ್ರೆ ಮಠದ ಜಗಲಿಯಲ್ಲೇ ಶ್ರೀನಿವಾಸನನ್ನು ಮಲಗಿಸಿ ತಾನೂ ಅಲ್ಲೇ ಮಲಗಿ, ಮರುದಿನ ಬೆಳಗ್ಗೆದ್ದು ಊರಿಗೆ ಹೊರಟರು.

ಉಡುಪಿಯಿಂದ ಹೊರಟ ಗೋವಿಂದ ಭಟ್ಟರು ಶಿರ್ವಕ್ಕೆ ಬಂದು ತಲುಪುವಾಗ ಮಧ್ಯಾಹ್ನದ ರಣಬಿಸಿಲು ಏರಿತ್ತು. ಹಸಿವೆ ಮತ್ತು ನಡೆದ ಆಯಾಸದಿಂದ ಸುಸ್ತಾಗಿದ್ದ ಅವರು ಆ ಪುಟ್ಟ ಪೇಟೆಯಲ್ಲಿ ಯಾವುದಾದರೂ ಬ್ರಾಹ್ಮಣರ ಹೋಟೆಲು ಇದೆಯೇ ಎಂದು ಹುಡುಕ ಹೊರಟಾಗ ಎಲ್ಲೂ ಕಾಣಸಿಲಿಲ್ಲ. ತಕ್ಷಣದ ಬಾಯಾರಿಕೆಯನ್ನಾದರೂ ಹೇಗೆ ತೀರಿಸುವುದೆಂದು ಅವರು ಚಿಂತಿಸುತ್ತಿದ್ದಾಗ, ಭಟ್ಟರ ಜೊತೆ ನಡೆದು ಸುಸ್ತಾಗಿ ಮುಖ ಕೆಂಪೇರಿದ್ದ ಶ್ರೀನಿವಾಸನನ್ನು ನೋಡಿದ ಕ್ರಿಶ್ಚಿಯನ್ ಹೆಂಗಸೊಬ್ಬಳು 'ಏನು? ಏನು ಬೇಕಿತ್ತು?' ಎಂಬಂತೆ ಇಬ್ಬರನ್ನೂ ವಿಚಾರಿಸಿದಳು. ಭಟ್ಟರು ಆಕೆ ಇದ್ದಲ್ಲಿಗೆ ತಾವೇ ಹೋಗಿ 'ತುಂಬಾ ಬಾಯಾರಿಕೆಯಾಗಿದೆ ಈ ಹುಡುಗನಿಗೆ. ಪಕ್ಕದಲ್ಲೆಲ್ಲಾದರೂ ಬಾವಿಯಿದ್ದರೆ ನೀರು ಸೇದಿ ನಾವು ಕುಡಿಯುತ್ತೇವೆ' ಎಂದು ವಿನಂತಿಸಿದರು.

ನತ್ತಲಾಬಾಯಿ, 'ನೀರಿಗೇನು ದರಿದ್ರಸ್ವಾಮಿ?